**O.S. 416-23** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R N D, ವಕೀಲರಿಂದಃ**

11. ವಾದಿ ನಂಃ 1 ರವರು ತಮ್ಮ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಹಾಗೂ 1 ನೇ ವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಹೇಳಿದ್ದೇನೆ ಅಂದರೆ ಸರಿ. ನಿಪಿ.11 ಹಾಗೂ 12 ರಲ್ಲಿ ರೆಂಟ ಅಂತಾ ಇದೆ. ಅದರಲ್ಲಿ ಬರೆದ ಅಕೌಂಟ ನಂಬರ ತುಳಸೀದಾಸ ಕಬಾಡೆ ಎಂದು ಇಲ್ಲ, ಫರ್ಮ ಹೆಸರು ಇದೆ. ಫರ್ಮ ನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ.4 ರಲ್ಲಿ ವಾದಿ ನಂಃ 1 ಹಾಗೂ 2 ರವರ ವಿಳಾಸ ಮನೆ ನಂಃ 6, ಶಾಂತಿನಿವಾಸ, ಮಹಾವೀರ ಕಾಲನಿ, ಶಾಂತಿನಗರ, ಬೆಂಗೇರಿ ಬಡಾವಣೆ, ಹುಬ್ಬಳ್ಳಿ-23 ಎಂದು ಇದೆ. ಅದೇ ಪ್ರಕಾರ ದಾವೆಯಲ್ಲಿ ವಿಳಾಸ ಇದೆ. ಭಾಡಿಗೆದಾರರನ್ನು ಬಿಡಿಸಲು ಒಂದು ನೋಟಿಸ ಕೊಟ್ಟರೆ ಸಾಕು ಅಂದರೆ, ಇರಬಹುದು. ನಮ್ಮ ವಕೀಲರ ಸಲಹೆ ಮೇರೆಗೆ ನಿಡಿ.10 ಕೊಟ್ಟ ನಂತರ ನಿಪಿ.4 ಕೊಟ್ಟಿದ್ದೇವೆ. ನಿಪಿ.4 ಹಾಗೂ ನಿಡಿ.10 ರಲ್ಲಿರುವ ವಿಳಾಸವಗಳು ಒಂದೇ ಇದೆ ಅಂದರೆ ಸರಿ. ನೋಂದಣಿ ಅಂಚೆ ಮೂಲಕ ಕಳಿಸಲಾಗಿದೆ ಅಂದರೆ ಸರಿ. ಸದರಿ ಅಂಚೆ ಕವರನ್ನು ನಿಡಿ.10-ಎ ಎಂದು ಗುರುತಿಸಲಾಯಿತು. ವಕೀಲರ ಸಲಹೆ ಮೇರೆಗೆ ಮತ್ತೊಂದು ನೋಟಿಸು ಕೊಟ್ಟಿದ್ದೇವೆ. ದಿಃ 15.09.2022 ರಂದು ಮತ್ತೊಂದು ನೋಟಿಸು ಕಳಿಸಿದ್ದೇವೆ ಅಂದರೆ ಸರಿ. ಸದರಿ ನೋಟಿಸನ್ನು ನಿಡಿ.11 ಎಂದು ಗುರುತಿಸಲಾಯಿತು. ನಿಡಿ.10 ಕ್ಕೆ ನನ್ನ ಹಾಗೂ 1 ನೇ ವಾದಿ ಸಹಿ ಇದೆ ಅಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪೇಜ ನಂ.2, ಪ್ಯಾರಾ ನಂಃ 3 ರಲ್ಲಿ ಪ್ರತಿವಾದಿರವರು ಭಾಡಿಗೆದಾರ ಹಾಗೂ ಭಾಡಿಗೆ ಹಣ ಕೊಟ್ಟಿದ್ದಾನೆಂದು ದಾಖಲೆ ಹಾಜರಪಡಿಸಿಲ್ಲ, ಬ್ಯಾಂಕ ಸ್ಟೇಟಮೆಂಟ ಹಾಜರಪಡಿಸಿದ್ದೇನೆ. ಪ್ರತಿವಾದಿ ಭಾಡಿಗೆದಾರ ಇರುತ್ತಾನೆ ಅಂತಾ ನಿಖರವಾದ ದಾಖಲೆ ಹಾಜರಪಡಿಸಿಲ್ಲ, ಆದರೆ ಉತಾರ ಹಾಜರಪಡಿಸಿದ್ದೇನೆ. ನಿಡಿ.11 ರಲ್ಲಿ ಭಾಡಿಗೆ ಬಾಕಿ, ಹೊಸ ಭಾಡಿಗೆ ನಿರ್ಧರಣೆ ಮತ್ತು ಸ್ವಾಧೀನ ನೋಟಿಸು ಎಂದು ಬರೆಯಲಾಗಿದೆ ಅಂದರೆ ಸರಿ. ಸದರಿ ಭಾಗವನ್ನು ನಿಡಿ.11-ಎ ಎಂದು ಗುರುತಿಸಲಾಯಿತು. ನಿಡಿ.11 ರ ಪ್ಯಾರಾ ನಂಃ 3 ರಲ್ಲಿ ತೋರಿಸಿದಂತಹ ಭಾಡಿಗೆ ಹಣದ ಬಗ್ಗೆ ನೋಂದಣಿ ದಾಖಲೆ ಹಾಜರಪಡಿಸಿಲ್ಲ. ಮತ್ತು ಬಾಕಿ ಹಣದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ.

**O.S. 416-23 PW : 1**

ಒಟ್ಟು ಬಾಕಿ 33 ಲಕ್ಷದ 16 ಸಾವಿರದಾ 980/- ರೂ.ಗಳ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಸದರಿ ಭಾಗವನ್ನು ನಿಡಿ.11-ಬಿ ಎಂದು ಗುರುತಿಸಲಾಯಿತು. ಆಸ್ತಿ ಖುಲ್ಲಾ ಜಾಗೆ ಕೊಟ್ಟು ಭಾಡಿಗೆದಾರರು ಕಟ್ಟಡದ ಭಾಡಿಗೆ ಇಷ್ಟೆ ಗಣ ಬರತ್ತದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ನಿಡಿ.11 ರಲ್ಲಿ ಪ್ಯಾರಾನಂಃ 5 ರಲ್ಲಿ ವಿವರಿಸಿದಂತೆ 2 ಲಕ್ಷ 50 ಸಾವಿರ, 30 ಸಾವಿರ ಹಾಗೂ 20 ಸಾವಿರ ರೂ ಗಳಂತೆ ಭಾಡಿಗೆ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಮಾರುಕಟ್ಟೆ ಮೌಲ್ಯದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಸಬ್ ರಜಿಸ್ಟ್ರಾರ್ ರವರ ದಾಖಲೆ ಹಾಜರಪಡಿಸಿಲ್ಲ. ರೆಂಟ ಕಂಟ್ರೋಲ್ ಅಧಿಕಾರಿಯಿಂದ ದಾಖಲೆ ಹಾಜರಪಡಿಸಿಲ್ಲ. ನಿಡಿ.11, ಪ್ಯಾರಾ ನಂಃ 5 ರಲ್ಲಿ ನಿರ್ದೇಶನ ನೀಡಿದ್ದೇವೆ ಅಂದರೆ ಸರಿ. ಸದರಿ ಭಾಗವನ್ನು ನಿಡಿ.11-ಸಿ ಎಂದು ಗುರುತಿಸಲಾಯಿತು. ಮಾರುಕಟ್ಟೆ ಆಧಾರದ ಮೇಲೆ ನಿರ್ದೇಶನ ನೀಡಿದ್ದೇವೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಬೆಳಗಾವಿ ರವರಿಗೆ ಸಂಬಂಧಪಟ್ಟಂತೆ ಆಸ್ತಿಗಳಿವೆ. ಅದರ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಮಾರುಕಟ್ಟೆಯಲ್ಲಿ ವಿಚಾರ ಮಾಡಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಿಡಿ.10 ಹಾಗೂ 11 ಮತ್ತು 4 ಗಳು ನೋಟಿಸು ಕೊಟ್ಟ ನಂತರ ನಮ್ಮ ಹಾಗೂ ಮೂಲ ಭಾಡಿಗೆದಾರರ ಮಕ್ಕಳ ನಡುವೆ ಭಾಡಿಗೆ ಮುಂದುವರೆಸಲು ಮಾತುಕತೆಯಾಗಿದೆ ಅಂದರೆ ಸರಿಯಲ್ಲ. ಒಂದೊಂದು ನೋಟಿಸು ಕೊಟ್ಟು ಅವರಿಗೆ ಹೆದರಿಸಿದ್ದೇವೆ ಅಂದರೆ ಸರಿಯಲ್ಲ. ನಾವು ಹೇಳಿದ ಹಾಗೆ ಭಾಡಿಗೆ ಕೊಡಲು 3 ನೋಟಿಸುಗಳನ್ನು ಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ನಿಡಿ.11 ರಲ್ಲಿ ಮಹಾನಗರ ಪಾಲಿಕೆ, ಕಾರ್ಮಿಕ ಇಲಾಖೆ, ವಾಣಿಜ್ಯ ಇಲಾಖೆ, ಆಹಾರ ಹಾಗೂ ನಾಗರೀಕ ಸರಬರಾಜು ಇಲಾಖೆ, ಮೊಬೈಲ್ ಟಾವರ ಇವರಿಗೆ ಪರವಾನಿಗೆ ಹಿಂಪಡೆದುಕೊಳ್ಳುವಂತೆ ನೋಟಿಸು ನೀಡಲಾಗುವುದು ಎಂದು ಹೇಳಿದ್ದೇವೆ ಅಂದರೆ ಸರಿ. ಒಂದು ವೇಳೆ ಮಾತಿನಂತೆ ನಡೆದುಕೊಳ್ಳದಿದ್ದಲ್ಲಿ ರಿಟ್ ಅರ್ಜಿ ಸಲ್ಲಿಸಿ, ನಿರ್ದೇಶನ ಪಡೆಯಲಾಗುವುದು ಎಂದು ಹೇಳಿದ್ದೇವೆ ಅಂದರೆ ಸರಿ. ಸಾರ್ವಜನಿಕ ಪ್ರಕಟಣೆ ಮಾಡಲಾಗುವುದು ಎಂದು ಹೇಳಿದ್ದೇವೆ ಅಂದರೆ ಸರಿ. ನಮ್ಮ ಹೇಳಿಕೆ ಪ್ರಕಾರ ನಮ್ಮ ವಕೀಲರು ಬರೆದಿದ್ದಾರೆ ಅಂದರೆ ಸರಿ. ಬೆದರಿಕೆ ನೋಟಿಸು ನೀಡಿದ್ದೇವೆ ಅಂದರೆ ಸರಿಯಲ್ಲ. Shri. Renuka Boarding and Lodging, Shri. Renuka Hotel, Renuka Sweets-FSSAI ಇವರಿಗೆ ವೈಯಕ್ತಿಕ ಪಾರ್ಟಿ ಮಾಡಿ ನೋಟಿಸ ನೀಡಿಲ್ಲ. ನಾಲ್ಕು ಫರ್ಮಗಳನ್ನು ಪಾರ್ಟಿ ಮಾಡಿ ಬೇರೆ ಬೇರೆ ದಾವೆ ದಾಖಲ್ ಮಾಡಿಲ್ಲ. ನಿಡಿ.11 ರಲ್ಲಿ ಭಾಡಿಗೆ ಮುಂದುವರೆಸುವ ವಿಚಾರ ಇರಲಿಲ್ಲ, ಹಾಗೆ ಬರೆಯಲಾಗಿದೆ. ಅದರ ಬಗ್ಗೆ ನನಗೆ ಮಾಹಿತಿ ಇತ್ತು.

**O.S. 416-23 PW : 1**

ನಿಡಿ.10 ಹಾಗೂ 11 ರ ನೋಟಿಸಗಳನ್ನು ನಾವು ಹಾಜರಪಡಿಸಿಲ್ಲ. ಕೆಳ ನ್ಯಾಯಾಲಯದಲ್ಲಿ ಹಾಜರಪಡಿಸಿರುವ ನಿಪಿ.4 ನ್ನು ಇಲ್ಲಿ ಹಾಜರಪಡಿಸಿದ್ದೇವೆ ಅಂದರೆ ಸರಿ. ನಿಡಿ.10 ಹಾಗೂ 11 ಗಳನ್ನು ವಕೀಲರಿಗೆ ತೋರಿಸಿದ್ದೇವೆ. ನಿಡಿ.10 ಹಾಗೂ 11 ಗಳನ್ನು ವಕೀಲರ ಸಲಹೆ ಮೇರೆಗೆ ಹಾಜರಪಡಿಸಿಲ್ಲ. ನಿಪಿ.4 ನೋಟಿಸು ಕೊಟ್ಟ ನಂತರ ಅವರ ಹಾಗೂ ನಮ್ಮ ಸಂಬಂಧ ಅಂತಿಮಗೊಳಿಸಬೇಕೆಂಬ ನಿರ್ಧಾರವಾಗಿತ್ತು ಅಂದರೆ ಸರಿ. ನಿಡಿ.11 ರಲ್ಲಿ ಹೊಸ ಭಾಡಿಗೆ ನಿರ್ಧರಣೆ ಎಂಬ ಸಂದರ್ಭ ಬರುತ್ತಿರಲಿಲ್ಲ ಅಂದರೆ ಸರಿ. ನಿಡಿ.11 ಪ್ಯಾರಾ ನಂಃ 8 ರಲ್ಲಿ ಕೊನೆಯದಾಗಿ ತಿಳಿಸುವುದೇನೆಂದರೆ ನೀವು ಭಾಡೇ ಆಸ್ತಿಗಳ ಕಬ್ಜೆ ಬಿಡದೆ ಮುಂದುವರೆಸಿದಲ್ಲಿ ನನ್ನ ಪಕ್ಷಗಾರರು ನಿರ್ಧಸಿರುವ ಎಲ್ಲ ಹೊಸ ಭಾಡಿಗೆಗಳನ್ನು ನೀವು ಒಪ್ಪಿದ್ದಾಗಿ ಪರಿಗಣಿಸಿ ವ್ಯವಹಾರಿಸುತ್ತಾರೆ ಎಂದು ಬರೆಯಲಾಗಿದೆ ಅಂದರೆ ಸರಿ.

12. ಈ ನೋಟಿಸು ಪಡೆದು 7 ದಿನಗಳಲ್ಲಿ ಮೇಲೆ ತಿಳಿಸಿದ ಹೊಸ ಭಾಡಿಗೆ ಮೊತ್ತವನ್ನು ಒಪ್ಪಿ ನೋಂದ ಕರಾರು ಪತ್ರ ಮಾಡಿಕೊಳ್ಳಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಸದರಿ ನೋಟಿಸಿಗೆ ನನ್ನ ಹಾಗೂ 1 ನೇ ವಾದಿಯ ಸಹಿ ದಿಃ 15.09.2022 ರಂದು ಇದೆ ಅಂದರೆ ಸರಿ. ನಿಪಿ.4 ನೋಟಿಸು ಕೊಟ್ಟ ನಂತರ ನಿಡಿ.11 ರ ನೋಟಿಸು ಕೊಡುವ ಪ್ರಸಂಗ ಬರುವುದಿಲ್ಲ ಅಂದರೆ, ವಕೀಲರ ಸಲಹೆ ಮೇರೆಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ನಿಪಿ.4 ರಲ್ಲಿ ತಾವು ಭಾಡೇದ ಆಸ್ತಿಯ ಶಾಂತ ರೀತಿಯ ಕಬ್ಜೆ ಮತ್ತು ಸಾಧೀನವನ್ನು ನಿಮಗೇ ಸೇರಿದ ಯಾವತ್ತೂ ಚರ ಸ್ವತ್ತುಗಳನ್ನು ಸದರಿ ಕಟ್ಟಡಗಳಿಂದ ಪೂರ್ತಿ ಖಾಲಿ ವ ಖುಲ್ಲಾ ಮಾಡಿ ಭಾಡೇದ ಆಸ್ತಿಗಳ ಕಬ್ಜೆಯನ್ನು ದಿಃ 31.08.2022 ಕ್ಕೆ ನೀಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ನಮ್ಮದು ಖಾಲಿ ಮಾಡಬೇಕೆಂದು ಒಂದೆ ನಿರ್ಧಾರವಾಗಿತ್ತು ಅಂದರೆ ಸರಿ. ನಿಡಿ.11 ನ್ನು ನಮ್ಮ ಹೇಳಿಕೆ ಪ್ರಕಾರ ನಮ್ಮ ವಕೀಲರು ಬರೆದಿದ್ದಾರೆ. ನಾವು ಭಾಡಿಗೆ ಮುಂದುವರೆಸಬೇಕೆಂಬ ವಿಚಾರಕ್ಕೆ ವಕೀಲರು ನಾವು ಹೇಳಿದ್ದನ್ನು ಬರೆದಿದ್ದಾರೆ ಅಂದರೆ ಸರಿ. ನೋಟಿಸು ತಪ್ಪು ಕೊಟ್ಟಿದ್ದಾರೆಂದು ವಕೀಲರ ವಿರುದ್ಧ ಕ್ರಮ ಜರುಗಿಸಿಲ್ಲ. ನಿಡಿ.11 ರಲ್ಲಿ ತೋರಿಸಿರುವ 33 ಲಕ್ಷ 16 ಸಾವಿರ 980/- ರೂ. ಗಳನ್ನು ಪಡೆಯಲು ಕೇಸ್ ಹಾಕಿಲ್ಲ. ಸದರಿ ಹಣವನ್ನು ಮೊದಲನೇ ದಾವೆಯಲ್ಲಿ ತೋರಿಸಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಅಂದರೆ ಗೊತ್ತಿಲ್ಲ.

**O.S. 416-23 PW : 1**

13. ಮೂಲ ಭಾಡಿಗೆದಾರನ ಒಬ್ಬ ಮಗ ತುಳಸೀದಾರ - ಪ್ರತಿವಾದಿ ದಾವಾ ಆಸ್ತಿ ಸಲುವಾಗಿ ವ್ಯವಹಾರ ಇತ್ತು, ಬೇರೆ ವ್ಯವಹಾರವಿಲ್ಲ. ಪ್ರತಿವಾದಿ ಯೂ ನಮ್ಮ ಮನೆಗೆ ಬಹಳಷ್ಟು ಸಲ ಬಂದಿದ್ದಾರೆ. ನಾವು ಅವರ ಮನೆಗೆ ಹೋಗಿಲ್ಲ. ಆದರೆ ನಾವು ಆಸ್ತಿಗೆ ಹೋಗಿದ್ದೇವೆ. ನಮ್ಮ ಮನೆ ವಿಳಾಸದ ಬಗ್ಗೆ ಪ್ರತಿವಾದಿಗೆ ಗೊತ್ತಿಲ್ಲ ಅಂದರೆ, ಗೊತ್ತಿಲ್ಲ.

14. ನಾವು ಲಿಂಗಾಯತ ಬಣಗಾರ ಸಮಾಜಕ್ಕೆ ಸೇರಿದವರು. ಶ್ರೀ ಗುರುಬಸವಲಿಂಗಾಯ ನಮಃ ಇದು ಲಿಂಗಾಯತ ದೇವರಿಗೆ ಸೇರಿದ ಹೆಸರು ಅಂದರೆ ಗೊತ್ತಿಲ್ಲ. ಮೂಲ ಭಾಡಿಗೆದಾರ ಪಟೇಗಾರ ಸಮಾಜದವರು ಅಂದರೆ ಸರಿ. ಅವರ ಮನೆ ದೇವರು ರೇಣುಕಾ-ಯಲ್ಲಮ್ಮ ಅಂದರೆ ಗೊತ್ತಿಲ್ಲ. ನಮ್ಮ ಹಾಗೂ ಪ್ರತಿವಾದಿಗಳ ನಡುವೆ ಅನೇಕ ಬಾರಿ ಭಾಡಿಗೆ ಮುಂದುವರೆಸುವ ಬಗ್ಗೆ ಮಾತುಕತೆಯಾಗಿ ದಾಖಲೆ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಸದರಿ ದಾಖಲೆ 7 ನೇ ತಿಂಗಳು 2023 ನೇ ಇಸ್ವಿ ಅಂದರೆ ಸರಿಯಲ್ಲ. ಇಂಗ್ಲೀಷದಲ್ಲಿ ಮತ್ತೊಂದು ಲೀಜ ದಾಖಲೆಯನ್ನು 2023 ರಲ್ಲಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಮಧ್ಯಂತರ ಅರ್ಜಿ-13 ರ ಜೊತೆಗೆ ಹಾಜರಪಡಿಸಿದ ಸ್ಟೇಟಮೆಂಟ 1 ಲಕ್ಷ 40 ಸಾವಿರ ರೂ. ಹಣ ಜಮಾಯಾಗಿದೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಅದರಲ್ಲಿ Sheet containing Rent details ಎಂದು ಬರೆಯಲಾಗಿದೆ ಅಂದರೆ ಸರಿ. ಆ ಸ್ಟೇಟಮೆಂಟ ಪ್ರಕಾರ 1 ಲಕ್ಷದಾ 40 ಸಾವಿರ ರೂ. ಹೆಚ್ಚಿನ ಭಾಡಿಗೆ ಜನೇವರಿ 2023 ಎಂದು ಬರೆದಿರುವುದು ಕಚ್ಚಾ ಪುರವಣಿಯಲ್ಲಿ ಸೆಪ್ಟಂಬರ 2022 ರಿಂದ ಆಗಸ್ಟ-2023 ವರೆಗೆ 1 ಲಕ್ಷ ರೂ. 40 ಸಾವಿರ ರೂ. ಎಂದು ಬರೆಯಲಾಗಿದೆ ಅಂದರೆ ಗೊತ್ತಿಲ್ಲ. ಮಧ್ಯಂತರ ಅರ್ಜಿ -3 ಕ್ಕೆ ವಕೀಲರ ತಕರಾರನ್ನು ಪ್ರತಿವಾದಿ ಮೇ-2023 ರಿಂದ ಭಾಡಿಗೆ ಕೊಟ್ಟಿಲ್ಲವೆಂದು ಬರೆಯಲಾಗಿದೆ ಅಂದರೆ ಸರಿ. ಜನವರಿ 2023 ರಿಂದ ಏಪ್ರಿಲ್ -2023 ವರೆಗೆ ಭಾಡಿಗೆ ಕೊಟ್ಟಿಲ್ಲ, ಆದರೆ ಹಣ ಜಮಾ ಮಾಡಿದ್ದಾರೆ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.